ಇದ್ದದ್ದು ಎರಡೇ ಕೋಣೆ. ಅದರಲ್ಲೊಂದು ಆಫೀಸು. ಇದ್ದದ್ದು ಒಬ್ಬರೇ ಮೇಸ್ಟ್ರು. ಅವರನ್ನು ನಾಜಿರ್ ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯರು ಎಂದು ಗೇಲಿ ಮಾಡುತ್ತಿದ್ದ. ಅಂದು ಅಲಿಮಾ ಕ್ಲಾಸಲ್ಲಿ 'ಎರಡೊಂದ್ಲ ಎರಡ' ಬರೆಯುವಾಗ ಕೇಳಿಸಿತು. "ಮೇss"

ಮೇಸ್ಟ್ರಿಗೆ ಸಿಟ್ಟು ಬಂತು. "ಯಾರದು "ಮೇss" ಎಂದದ್ದು. ಮಂಗ ನಿನ್ನ ಚರ್ಮ ಸುಲಿತೇನೆ" ಎಂದು ಅಬ್ಬುಬಕ್ಕರನ ತೋಳು ಹಿಡಕೊಂಡರು. ಆಗ "ಮೇss" ಸದ್ದಿನೊಡನೆ ಅಲಿಮಾಳ ಕುಟ್ಟ ಒಳನುಗ್ಗಿದ. ಅಷ್ಟರಲ್ಲಾಗಲೇ ಅಬ್ಬುಬಕ್ಕರ ಚಡ್ಡಿ ಒದ್ದೆ ಮಾಡಿಕೊಂಡಿದ್ದ. ಮೇಸ್ಟ್ರು ಅವನ ಕೈ ಬಿಟ್ಟು, "ಇದ್ಯಾರದು ಈ ಆಡು?" ಎಂದು ಪ್ರಶ್ನಿಸಿದರು. ಮಕ್ಕಳು ಒಕ್ಕೊರಲಿನಿಂದ "ಅಲಿಮಾಳ ಆಡು" ಎಂದರು. ಮೇಸ್ಟ್ರು ಯಾರಿಗೆ ಹೊಡಿಯುವುದೆಂದು ಗೊತ್ತಾಗದೆ ಸಂಕಟದಲ್ಲಿ ಸಿಲುಕಿದರು. ಅಬ್ಬುಬಕ್ಕರನಿಗೆ ಹೊಡಿಯಲು ಕಾರಣ ಇರಲಿಲ್ಲ. ಆಡಿಗೆ ಹೊಡಿಯೋಣವೆಂದರೆ ಅದು ಮುದ್ದು ಮುದ್ದಾಗಿತ್ತು. ಅಲಿಮಾಳಿಗೆ ಹೊಡಿಯೋಣವೆಂದು ಅವರು ಕೈ ಎತ್ತಿದಾಗ ಅವಳು ಉಪ್ಪ ಉಮ್ಮರನ್ನು ಕಳಕೊಂಡವಳು ಎಂಬುದು ನೆನಪಾಗಿ ಮೇಲೆ ಹೋದ ಕೈ ನಿಧಾನವಾಗಿ ಕೆಳಗಿಳಿಯಿತು.

"ಈ ಆಡನ್ನು ಯಾಕಮ್ಮಾ ಕರೆತಂದೆ?" "ನಾನದನ್ನು ಕಟ್ಟಿ ಹಾಕಿ ಬಂದಿದ್ದೆ ಸರ್. ಅದು ಹೇಗೆ ಬಂತೋ ಗೊತ್ತಿಲ್ಲ" ಎಂದು ಅಲಿಮಾ ಅಳತೊಡಗಿದಳು. ಅವಳು ಕಣ್ಣೀರು ಮೂಗಿನ ನೀರಿನೊಡನೆ ಬಾಯಿಯಲ್ಲಿ ಸಂಗಮಿಸಿತು.

ಮೇಸ್ಟ್ರು ಕಂಗಾಲಾದರು. ಕೊನೆಗೆ ಅವಳ ಆಡಿನ ಬಳಿಗೆ ಹೋಗಿ, "ಅಲಿಮಾ, ಈ ಆಡನ್ನು ಯಾರು ಎಂದುಕೊಂಡಿದ್ದಿ? ಕಾಣೆಯಾದ ನಿನ್ನ ಅಣ್ಣನನ್ನೇ ಅಲ್ಲಾ ಈ ರೂಪದಲ್ಲಿ ನಿನ್ನನ್ನು ಪ್ರೀತಿಯಿಂದ ನೋಡಿಕೊಳ್ಳಲು ಕಳಿಸಿದ್ದು. ಆಡು ಎಂದರೆ ನನಗೂ ಪ್ರೀತಿಯೇ. ಅದಕ್ಕೇ ಆಡಿಗೆ ನಾನು ಪೆಟ್ಟು ಕೊಡಲಿಲ್ಲ. ಅಲ್ಲಿ ನೋಡು. ಗೋಡೆಯಲ್ಲಿ ನಮ್ಮ ರಾಷ್ಟ್ರಪಿತ ಗಾಂಧೀಜಿ ಇದ್ದಾರೆ. ಅವರು ರಾತ್ರಿ ಹೊತ್ತು ಊಟವನ್ನೇ ಮಾಡುತ್ತಿರಲಿಲ್ಲವಂತೆ. ನಾಲ್ಕು ನೆಲಗಡಲೆ ಮತ್ತು ಒಂದು ಲೋಟಾ ಆಡಿನ ಹಾಲು ಅವರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಸಾಧ್ಯವಾದದ್ದು ಆಡಿನ ಹಾಲು ಕುಡಿದೇ ಅಂತೆ".

ಅಲಿಮಾ ಗಾಂಧೀಜಿಯ ಭಾವಚಿತ್ರ ನೋಡಿದಳು. ಆಡಿನ ಹಾಲು ಕುಡಿದು ಈ ಅಜ್ಜ ದೊಡ್ಡ ಜನವಾದ್ರು. ಆದರೆ, ಕುಟ್ಟ ಹಾಲು ಕೊಡುವುದಿಲ್ಲವಲ್ಲಾ? ಬೇಡ, ತನಗೆ ಆಡಿನ ಹಾಲು ಬೇಡ. ಕುಟ್ಟ ಇದ್ದರೆ ಸಾಕು ಎಂದು ಅದನ್ನು ತಬ್ಬಿಕೊಂಡಳು. ಮಧ್ಯಾಹ್ನ ಮಕ್ಕಳು ತಾವು ಕಟ್ಟಿ ತಂದಿದ್ದ ಬುತ್ತಿಗಳಿಂದ ಕುಟ್ಟನಿಗೆ ಪಾಲು ನೀಡಿದರು. ಅಂದು ಇಡೀ ದಿನ ಮೇಸ್ಟ್ರು ಗಾಂಧೀಜಿ ಕತೆ ಹೇಳಿದರು. ಸಂಜೆ ಶಾಲೆ ಬಿಡುವಾಗ ಅಲಿಮಾಳನ್ನು ಒಳಗೆ ಕರೆದು, "ಆಡನ್ನು ಶಾಲೆಗೆ ಕರಕೊಂಡು ಬರಬೇಡಮ್ಮ. ಆಡು ಹೀಗೆ ಬಂದರೆ ನಾನು ದಿನಾ ಗಾಂಧೀಜಿ ಪಾಠವನ್ನೇ ಮಾಡಬೇಕಾಗುತ್ತದೆ" ಎಂದು ಅವಳ ಕೆನ್ನೆಗುಳಿಯನ್ನು ಚಿವುಟಿದರು. ಆ ಬಳಿಕ ಅಲಿಮಾ ಶಾಲೆಗೆ ಹೊರಡುವಾಗ ಕುಟ್ಟನನ್ನು ಭದ್ರವಾಗಿ ಕಟ್ಟಿ ಹಾಕಿದೆಯೇ ಎಂದು ಹಗ್ಗ ಎಳೆದು ಪರೀಕ್ಷೆ ಮಾಡಿಯೇ ಹೋಗುತ್ತಿದ್ದಳು.

ಅಪ್ಪ ಅಮ್ಮ ಸುನಾಮಿ ತೆರೆಗಳಿಗೆ ಬಲಿಯಾದ ಬಳಿಕ ಭಾವ ನಾಜಿರ್ ಅಲಿಮಾಳನ್ನು ಕಣ್ಣ ರೆಪ್ಪೆಯಂತೆ ಕಾಪಾಡುತ್ತಿದ್ದ. ಅಲಿಮಾಳಿಗೂ ಅಷ್ಟೆ. ಈ ಭಾವ ಎಲ್ಲಿಯವರೆಂದು ಅವಳಿಗೆ ಗೊತ್ತಿರಲಿಲ್ಲ. ಎಲ್ಲಿಂದಲೋ ಬಂದು ದೂರದ ಸಂಬಂಧ ಹೇಳಿ ಮನೆಯಲ್ಲಿ ತಂಗಿದವರಿಗೆ ಉಪ್ಪ ಉಮ್ಮ ಅಕ್ಕನನ್ನು ಮದುವೆ ಮಾಡಿಸಿ ಕೊಟ್ಟಿದ್ದರು. ನಗರದ ಬೇಕರಿಯೊಂದರಲ್ಲಿ ದುಡಿಯುವ ಭಾವ ಬೆಳಗ್ಗೆ ಎಂಟಕ್ಕೆ ಹೋಗಿ ರಾತ್ರಿ ಎಂಟಕ್ಕೆ ವಾಪಸಾಗುತ್ತಿದ್ದರು. ಉಪ್ಪ ಉಮ್ಮ ಬದುಕಿರುವಾಗ ಭಾವ ನಾಜಿರ್ ಅವಳನ್ನು ಎಷ್ಟೋ ಸಲ ಹಾಸ್ಯ ಮಾಡಿದ್ದಿದೆ. "ಈಗ ನಿನ್ನ ಅಕ್ಕನನ್ನು ಮದುವೆ ಮಾಡಿಕೊಂಡಿದ್ದೇನೆ. ಅವಳು ಮುದುಕಿಯಾದ ಮೇಲೆ ನಿನ್ನನ್ನು ಮದುವೆ ಮಾಡಿಕೊಳ್ಳುತ್ತೇನೆ."